NP – 004

# I Semester B.B.A. Examination, March/April 2023
## (NEP Scheme) (2021-22 and Onwards)
## (F+R)
## ಕನ್ನಡ ಭಾಷಾ ಪತ್ಯ
## ವ್ಯವಹಾರ ನಿರ್ವಹಣಾ ಕನ್ನಡ (ಪತ್ರಿಕೆ – I)

Time : 2½ Hours Max. Marks : 60

I. ಈ ಕೆಳಗಿನ ಪ್ರಶ್ನೆಗಳಲ್ಲಿ **4ಕ್ಕೆ 80** ಪದಗಳಿಗೆ ಮೀರದಂತೆ ಉತ್ತರಿಸಿ. **(4×5=20)**

1) ದ್ವಿಭಾಷಿತ್ವ ಎಂದರೇನು ? ಪರಿಚಯಿಸಿ.

2) ಸ್ಮಾರ್ಟ್ ಸಹಾಯಕರು ಯಾರು ?

3) ಭಾರತದಲ್ಲಿನ ನೀರು ಕೊಡುವ ಸಂಸ್ಕೃತಿಯನ್ನು ಕುರಿತ ನೇಮಿಚಂದ್ರ ಅವರ ಅನುಭವವನ್ನು ಕುರಿತು ಬರೆಯಿರಿ.

4) ರಮಾನಂದನ ವ್ಯಕ್ತಿತ್ವ ' ಹೃದಯದ ತೊಂದರೆ ' ಕತೆಯಲ್ಲಿ ಹೇಗೆ ಮೂಡಿಬಂದಿದೆ ?

5) ಲಲಿತಾಳ ಸ್ವಾಭಿಮಾನದ ಬದುಕನ್ನು ಪರಿಚಯಿಸಿ.

6) ಕರಾವಳಿ ಕರ್ನಾಟಕದ ಬ್ಯಾಂಕಿಂಗ್ ಉದ್ಯಮದ ಉನ್ನತಿಗೆ ಕಾರಣಗಳೇನು ?

II. ಈ ಕೆಳಗಿನ ಪ್ರಶ್ನೆಗಳಲ್ಲಿ **2ಕ್ಕೆ 160** ಪದಗಳಿಗೆ ಮೀರದಂತೆ ಉತ್ತರಿಸಿ. **(2×10=20)**

1) ಹುಯಿಲಗೋಳ ನಾರಾಯಣರಾಯರು ಕನ್ನಡ ನಾಡಿನ ಮಹತ್ವವನ್ನು ಹೇಗೆ ನಿರೂಪಿಸಿದ್ದಾರೆ ? ಚರ್ಚಿಸಿ.

2) ' ಗಂಡ ಹೆಂಡಿರ ಜಗಳಂದ್ರ ನೋಡ ಏ ಗಂಧ ತೀಡಿದ್ಹಾಂಗ ' ಎಂದು ಕವಿ ಹೇಳಲು ಕಾರಣವೇನು ? ವಿವರಿಸಿ.

3) ವಾರೆನ್ ಬಫೆಟ್ ವಿಶ್ವ ಶ್ರೇಷ್ಠ ಹೂಡಿಕೆದಾರನಾದದ್ದು ಹೇಗೆ ? ವಿಶ್ಲೇಷಿಸಿ.

III. ಕೆಳಕಂಡ ಪತ್ಯವನ್ನು **ಮೂರನೇ ಒಂದು** ಭಾಗಕ್ಕೆ ಸಂಕ್ಷೇಪಿಸಿ ಬರೆದು ಸೂಕ್ತ ಶೀರ್ಷಿಕೆ ನೀಡಿ. **(1×3=3)**

ಜಾನಪದ ಕತೆಗಳಲ್ಲಿ ಹಾಗೂ ಹಾಡುಗಳಲ್ಲಿ ಹೆಂಗಸು ಹೆಣೆಯುವ ಅಥವಾ ನೇಯ್ಗೆ ಮಾಡುವ ಹಲವಾರು ಪ್ರಸಂಗಗಳು ಬರುತ್ತವೆ. ಮಹಾರಾಣಿಯರು ಹಾಗೂ ಸುಂದರ ರಾಜಕುಮಾರಿಯರಿಂದ ಹಿಡಿದು ಸಾಮಾನ್ಯ ಗೃಹಿಣಿಯರವರೆಗೆ ಎಲ್ಲರಿಗೂ ಗೊತ್ತಿದ್ದ ಪರಿಣತಿಯದು. ಯುದ್ಧಕ್ಕೆ ಹೋದ ಗಂಡ ಒಡೀಸಿಯನ್‌ಗಾಗಿ

P.T.O.

ಇಪ್ಪತ್ತು ವರ್ಷ ಕಾದಿದ್ದ ಪೆನೆಲೋಪೆ ತನ್ನ ಅಂತಃಪುರದಲ್ಲಿ ನೇಯ್ಗೆ ಮಾಡುತ್ತ ಕಾಲ ನೂಕುತ್ತಾಳೆ. ಐರಿಷ್ ಜಾನಪದ ಕತೆಯೊಂದರಲ್ಲಿ ಏಳು ಜನ ಶಾಪಗ್ರಸ್ತ ಅಣ್ಣಂದಿರನ್ನು ಪ್ರಾಣಿರೂಪದಿಂದ ಮನುಷ್ಯ ರೂಪಕ್ಕೆ ತರಲು ರಾಜಕುಮಾರಿಯೊಬ್ಬಳು ಏಳು ಅಂಗಿಗಳನ್ನು ನೇಯುತ್ತಾಳೆ.

ಭಾರತದ ಈಶಾನ್ಯ ರಾಜ್ಯಗಳಲ್ಲಿ ಈಗಲೂ ಮಹಿಳೆಯರು ಬಟ್ಟೆ ನೇಯುವುದು ಸುಸಂಸ್ಕೃತಿಯ ಲಕ್ಷಣವೆಂದು ಪರಿಗಣಿಸುತ್ತಾರೆ. ಅಸ್ಸಾಮಿನ ಬ್ರಾಹ್ಮಣ ಕನ್ಯೆಯರು ಕೂಡ ಬಟ್ಟೆ ನೇಯುತ್ತಿದ್ದರಂತೆ. ಅಸ್ಸಾಮಿನ ಮನೆಯೊಂದಕ್ಕೆ ಅತಿಥಿಯಾಗಿ ಹೋದರೆ, ನಮ್ಮಲ್ಲಿ ಕಾಯಿ, ಕುಬುಸದ ಬಟ್ಟೆ ಉಡುಗೊರೆ ಕೊಟ್ಟಂತೆ ಅವರು 'ಗಮ್ ಛಾ' ಕೊಟ್ಟು ಮರ್ಯಾದೆ ಮಾಡುತ್ತಾರೆ. 'ಗಮ್ ಛಾ' ಎಂದರೆ ಸುಂದರ ವಿನ್ಯಾಸವುಳ್ಳ ಸಣ್ಣದೊಂದು ಅಂಗವಸ್ತ್ರ ವ್ಯತ್ಯಾಸವೆಂದರೆ ಕುಬುಸದ ಬಟ್ಟೆಯನ್ನು ನಾವು ಅಂಗಡಿಯಿಂದ ಕೊಂಡು ತಂದಿರುತ್ತೇವೆ. ಅವರು ಗಮ್ ಛಾವನ್ನು ಮನೆಯಲ್ಲಿಯೇ ಸ್ವತಃ ನೇಯ್ದು ಇಟ್ಟಿರುತ್ತಾರೆ.

IV. ಸಂಕ್ಷೇಪಿಸಿದ ಬರಹ ಆಧರಿಸಿ ಎರಡು ಪ್ರಶ್ನೆಗಳನ್ನು ರೂಪಿಸಿ. (2x1=2)

V. ಇವುಗಳಲ್ಲಿ ಎರಡು ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ. (2x1=2)

1) ಸೂಡು
2) ನಮೂನೆ
3) ದಿವಾಳಿ
4) ಅರಿವೆ

VI. ಕನ್ನಡ ಸಾಹಿತ್ಯದ ಮುಖ್ಯ ಕೃತಿಗಳನ್ನು ಡಿಜಿಟಲ್ ರೂಪದಲ್ಲಿ ಪ್ರಕಟಿಸುವಂತೆ ಕೋರಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ಒಂದು ಪತ್ರ ಬರೆಯಿರಿ. (1x4=4)

VII. ಇವುಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ. (4x1=4)

1) ಪರಸ್ಥಳ
2) ಕಣಜ
3) ದುಬಾರಿ
4) ಲೇವಾದೇವಿ
5) ಧೃತಿ
6) ನಿಧಿ.

VIII. ಇವುಗಳಿಗೆ ಒಂದೊಂದು ಸರಿ ಉತ್ತರವನ್ನು ಗುರುತಿಸಿ, ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ. (5×1=5)

1) ಜೀವಂತ ಭಾಷೆಯಲ್ಲಿ ಹಲವು ರೀತಿಯ ________ ಭಾಷೆಗಳಿರುತ್ತವೆ ?

ಎ) ದ್ವಿ ಬಿ) ಉಪ ಸಿ) ಮೇಲ್‌ಸ್ತರದ ಡಿ) ಕೆಳಸ್ತರದ

2) ಯಾವುದೇ ರಾಜ್ಯದಲ್ಲಿರುವ ಕೇಂದ್ರ ಸರ್ಕಾರದ ಕಛೇರಿಗಳಲ್ಲಿ ಹಿಂದಿಗೆ ಕೊಡುವ ಸ್ಥಾನಮಾನವನ್ನೇ ಯಾವ ಭಾಷೆಗೂ ಕೊಡಬೇಕು ?

ಎ) ಮಾತೃಭಾಷೆ ಬಿ) ಇಂಗ್ಲಿಷ್

ಸಿ) ರಾಜ್ಯಭಾಷೆ ಡಿ) ಮೇಲಿನ ಎಲ್ಲವೂ

3) ನಗರದಲ್ಲಿ ಯಾವುದಕ್ಕೆ ಪಟ್ಟದಾನೆಯ ಬಡ್ತಿ ಸಿಕ್ಕಿದೆ ?

ಎ) ವಿಲಾಸ ಹಾಗೂ ಉಪಭೋಗಕ್ಕೆ ಬಿ) ಮನಸಿನ ವಿಕಾಸ

ಸಿ) ಜ್ಞಾನ ಡಿ) ಕ್ಷೇಮ ಮತ್ತು ನೆಮ್ಮದಿ

4) ' ಹೆಣ್ಣು ಮಕ್ಕಳ ಸಂಘಟನೆಯಾಗಿ ಚರಕ ' ಲೇಖನವನ್ನು ಬರೆದವರು ಯಾರು ?

ಎ) ಟಿ. ಎಂ. ಸುಬ್ಬರಾಯ ಬಿ) ಪ್ರಸನ್ನ

ಸಿ) ಜಿ. ಎಸ್. ಆಮೂರ ಡಿ) ಬರಗೂರು ರಾಮಚಂದ್ರಪ್ಪ

5) ಜಲನಿಧಿಯನೆ ನುಂಗಿದವನು ಯಾರು ?

ಎ) ಲೆಕ್ಕಿಗ ಬಿ) ಪರಶುರಾಮ

ಸಿ) ವೀರವೃಂದ ಡಿ) ಹನುಮಂತ

---